
15

ಕೊರೋನಾ

ಮುಂತಾದ ಸಾಂಕ್ರಾಮಿಕ ರೋಗಗಳಿಂದ ರಕ್ಷಣೆ ಪಡೆಯಲು ಕೆಲವು ಪ್ರಾರ್ಥನೆಗಳು



ಶೈಖ್ ಮುಹಮ್ಮದ್ ಸಾಲಿಹ್ ಅಲ್‌ಮುನಜ್ಜಿದ್

مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಹಾನಿ ಮತ್ತು ಕೆಡುಕುಗಳಿಂದ ರಕ್ಷಣೆ ನೀಡುವ ಅನೇಕ ಝಿಕ್ರ್ ಮತ್ತು ಪ್ರಾರ್ಥನೆಗಳನ್ನು ಹೇಳುತ್ತಿರಬೇಕೆಂದು ಮುಸಲ್ಮಾನನಿಗೆ ಉತ್ತೇಜನ ನೀ-ಡುವಂತಹ ಅನೇಕ ಅಧಿಕೃತ ಹದೀಸ್‌ಗಳು ಪ್ರವಾದಿ (ﷺ) ಯವರ ಸುನ್ನತ್ತಿನಲ್ಲಿವೆ. ಈ ಝಿಕ್ರ್ ಮತ್ತು ಪ್ರಾರ್ಥ-ನೆಗಳು ಅವುಗಳ ಸಾರ್ವತ್ರಿಕ ಅರ್ಥಗಳಲ್ಲಿ ಸಾಂಕ್ರಾಮಿಕ ರೋಗಗಳಿಂದ ಹಾಗೂ ಇತರ ಎಲ್ಲಾ ಕಾಯಿಲೆಗಳಿಂದ ರಕ್ಷಣೆ ನೀಡುತ್ತವೆ. ಅವುಗಳಲ್ಲಿ ಕೆಲವು ಹೀಗಿವೆ:

1. ಉಸ್ಮಾನ್ ಬಿನ್ ಅಫ್ಫಾನ್(رضي الله عنه) ರಿಂದ ವರದಿ. ಅವರು ಹೇಳುತ್ತಾರೆ: ಪ್ರವಾದಿ(ﷺ) ಯವರು ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: "ಯಾರು

بِسْمِ اللَّهِ الَّذِي لَا يَضُرُّ مَعَ اسْمِهِ شَيْءٌ فِي الْأَرْضِ وَلَا فِي السَّمَاءِ وَهُوَ السَّمِيعُ الْعَلِيمُ

ಬಿಸ್ಮಿಲ್ಲಾಹಿಲ್ಲಝೀ ಲಾ ಯದುರ್ರು ಮಅಸ್ಮಿಹೀ ಶೈಉನ್

ಫಿಲ್ ಅರ್ದಿ ವಲಾ ಫಿಸ್ಸಮಾಅ್, ವಹುವ ಸ್ಸಮೀಉಲ್ ಅಲೀಮ್. (ಯಾರ ನಾಮವನ್ನು ಉಚ್ಚರಿಸಿದರೆ ಭೂಮಿ-ಯಲ್ಲಿ ಅಥವಾ ಆಕಾಶದಲ್ಲಿರುವ ಯಾವುದೇ ವಸ್ತುವಿ-ಗೂ ಹಾನಿ ಮಾಡಲು ಸಾಧ್ಯವಿಲ್ಲವೋ ಆ ಅಲ್ಲಾಹನ ನಾಮದಲ್ಲಿ. ಅವನು ಎಲ್ಲವನ್ನೂ ಆಲಿಸುವವನೂ ತಿಳಿ-ದವನೂ ಆಗಿದ್ದಾನೆ) ಎಂದು ಮೂರು ಸಲ ಹೇಳುತ್ತಾ-ರೋ ಅವರಿಗೆ ಬೆಳಗಾಗುವ ತನಕ ಯಾವುದೇ ಆಕ-ಸ್ಮಿಕ ಸಂಕಟ ಬಾಧಿಸುವುದಿಲ್ಲ. ಯಾರು ಇದನ್ನು ಬೆಳಗ್ಗೆ ಮೂರು ಸಲ ಹೇಳುತ್ತಾರೋ ಅವರಿಗೆ ಸಂಜೆಯಾಗುವ ತನಕ ಯಾವುದೇ ಆಕಸ್ಮಿಕ ಸಂಕಟ ಬಾಧಿಸುವುದಿಲ್ಲ. (ಅಬೂದಾವೂದ್ 5088, ಅತ್ತಿರ್ಮಿದಿ 3388)

ಅತ್ತಿರ್ಮಿದಿಯಲ್ಲಿರುವ ವರದಿ ಹೀಗಿದೆ: “ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಯಾರು

بِسْمِ اللَّهِ الَّذِي لَا يَضُرُّ مَعَ اسْمِهِ شَيْءٌ فِي

الْأَرْضِ وَلَا فِي السَّمَاءِ وَهُوَ السَّمِيعُ الْعَلِيمُ

ಬಿಸ್ಮಿಲ್ಲಾಹಿಲ್ಲಝೀ ಲಾ ಯದುರ್ರು ಮಅಸ್ಮಿಹೀ ಶೈಉನ್ ಫಿಲ್ ಅರ್ದಿ ವಲಾ ಫಿಸ್ಸಮಾಅ್, ವಹುವ ಸ್ಸಮೀಉಲ್ ಅಲೀಮ್. (ಯಾರ ನಾಮವನ್ನು ಉಚ್ಚರಿಸಿದರೆ ಭೂಮಿ-ಯಲ್ಲಿ ಅಥವಾ ಆಕಾಶದಲ್ಲಿರುವ ಯಾವುದೇ ವಸ್ತುವಿ-ಗೂ ಹಾನಿ ಮಾಡಲು ಸಾಧ್ಯವಿಲ್ಲವೋ ಆ ಅಲ್ಲಾಹನ ನಾಮದಲ್ಲಿ. ಅವನು ಎಲ್ಲವನ್ನೂ ಆಲಿಸುವವನೂ ತಿ-ಳಿದವನೂ ಆಗಿದ್ದಾನೆ) ಎಂದು ಮೂರು ಸಲ ಹೇಳು-ತ್ತಾರೋ ಅವರಿಗೆ ಯಾವುದೇ ವಸ್ತು ಹಾನಿ ಮಾಡು-ವುದಿಲ್ಲ." (ಅತ್ತಿರ್ಮಿದಿ ಇದನ್ನು ಸಹೀಹ್ ಎಂದಿದ್ದಾರೆ)

2. ಅಬೂ ಹುರೈರ(ﷺ) ರಿಂದ ವರದಿ. ಒಬ್ಬ ವ್ಯಕ್ತಿ ಪ್ರವಾದಿ(ﷺ) ಯವರ ಬಳಿಗೆ ಬಂದು ಹೇಳಿದರು: "ಓ ಪ್ರವಾದಿಯವರೇ, ನಿನ್ನೆ ರಾತ್ರಿ ನನಗೆ ಒಂದು ಚೇಳು ಕಚ್ಚಿಬಿಟ್ಟಿತು." ಆಗ ಪ್ರವಾದಿ(ﷺ) ಯವರು ಹೇಳಿದರು: "ಸಂಜೆಯಾಗುವಾಗ ನೀನು

أَعُوذُ بِكَلِمَاتِ اللَّهِ التَّامَّاتِ مِنْ شَرِّ مَا خَلَقَ

ಅಊರುಝು ಬಿಕಲಿಮಾತಿಲ್ಲಾಹಿ ತ್ತಾಮ್ಮಾತಿ ಮಿನ್ ಶರ್ರಿ ಮಾ ಖಲಕ್ (ಅಲ್ಲಾಹು ಸೃಷ್ಟಿಸಿದ ಎಲ್ಲಾ ರೀತಿಯ ಕೆ-ಡುಕುಗಳಿಂದ ಅವನ ಪರಿಪೂರ್ಣ ವಚನಗಳ ಮೂಲಕ ನಾನು ರಕ್ಷೆ ಬೇಡುತ್ತೇನೆ) ಎಂದು ಹೇಳಿರುತ್ತಿದ್ದರೆ ಅದು ನಿನಗೆ ಕಚ್ಚುತ್ತಿರಲಿಲ್ಲ." (ಮುಸ್ಲಿಂ 2709)

3. ಅಬ್ದುಲ್ಲಾಹ್ ಬಿನ್ ಖುಬೈಬ್(ﷺ) ರಿಂದ ವರದಿ. ಅವರು ಹೇಳುತ್ತಾರೆ: ನಾವು ಧಾರಾಕಾರ ಮಳೆ ಸು-ರಿಯುತ್ತಿದ್ದ ಕಾರ್ಗತ್ತಲ ರಾತ್ರಿಯಲ್ಲಿ ಪ್ರವಾದಿ(ﷺ) ಯವರ ಹಿಂದೆ ನಮಾಝ್ ಮಾಡಲು ಹೊರಟೆವು. ನಾವು ಅವರನ್ನು ಭೇಟಿಯಾದಾಗ ಅವರು ಕೇಳಿದರು: "ನೀವು ನಮಾಝ್ ಮಾಡಿದ್ದೀರಾ?" ನಾನು ಏನೂ ಮಾತನಾಡಲಿಲ್ಲ. ಅವರು ಹೇಳಿದರು: "ಹೇಳಿರಿ." ನಾನು ಏನೂ ಮಾತನಾಡಲಿಲ್ಲ. ಅವರು ಹೇಳಿದರು: "ಹೇಳಿರಿ." ನಾನು ಏನೂ ಮಾತನಾಡಲಿಲ್ಲ. ನಂತರ

ಅವರು ಹೇಳಿದರು: “ಹೇಳಿರಿ.” ಆಗ ನಾನು ಕೇಳಿದೆ: “ಓ ಪ್ರವಾದಿಯವರೇ, ನಾನೇನು ಹೇಳಬೇಕು?” ಅವರು ಹೇಳಿದರು: “ಸಂಜೆಯಾಗುವಾಗ ಮತ್ತು ಬೆಳ-ಗಾಗುವಾಗ ಮೂರು ಮೂರು ಸಲ ಕುಲ್ ಹುವಲ್ಲಾಹು ಅಹದ್, ಕುಲ್ ಅಊಝು ಬಿ ರಬ್ಬಿಲ್ ಫಲಕ್ ಮತ್ತು ಕುಲ್ ಅಊಝು ಬಿ ರಬ್ಬಿನ್ನಾಸ್ ಹೇಳಿರಿ. ಅದು ನಿಮಗೆ ಎಲ್ಲ ವಿಷಯಗಳಿಂದಲೂ ರಕ್ಷಣೆ ನೀಡಲು ಧಾರಾಳ ಸಾಕು.” (ಅತ್ತಿರ್ಮಿದಿ 3575, ಅಬೂದಾವೂದ್ 5082)

ಶೈಖ್ ಅಬ್ದುಲ್ ಅಝೀಝ್ ಇಬ್ನ್ ಬಾಝ್ ಹೇಳುತ್ತಾ-ರೆ. “ಎಲ್ಲ ಕೆಡುಕುಗಳಿಂದ ಸುರಕ್ಷತೆ, ಕ್ಷೇಮ, ಮನಶಾಂತಿ ಮತ್ತು ರಕ್ಷಣೆಯನ್ನು ಪಡೆಯುವ ಒಂದು ವಿಧಾನವು ಪ್ರ-ತಿದಿನ ಬೆಳಗ್ಗೆ ಮತ್ತು ಸಂಜೆ

أَعُوذُ بِكَلِمَاتِ اللَّهِ التَّامَّاتِ مِنْ شَرِّ مَا خَلَقَ

ಅಊಝು ಬಿಕಲಿಮಾತಿಲ್ಲಾಹಿ ತ್ತಾಮ್ಮಾತಿ ಮಿನ್ ಶರ್ರಿ

ಮಾ ಖಲಕ್ (ಅಲ್ಲಾಹು ಸೃಷ್ಟಿಸಿದ ಎಲ್ಲಾ ರೀತಿಯ ಕೆಡುಕುಗಳಿಂದ ಅವನ ಪರಿಪೂರ್ಣ ವಚನಗಳ ಮೂಲಕ ನಾನು ರಕ್ಷೆ ಬೇಡುತ್ತೇನೆ) ಎಂದು ಹೇಳಿ ಅಲ್ಲಾಹು ಸೃಷ್ಟಿಸಿದ ಎಲ್ಲ ಕೆಡುಕುಗಳಿಂದ ಅವನ ಪರಿಪೂರ್ಣ ವಚನಗಳ ಮೂಲಕ ರಕ್ಷೆ ಬೇಡುವುದಾಗಿದೆ. ಇದು ರಕ್ಷಣೆಯನ್ನು ನೀಡುವ ಒಂದು ವಿಧಾನವೆಂದು ತಿಳಿಸುವ ಅನೇಕ ಹದೀಸ್‌ಗಳು ವರದಿಯಾಗಿವೆ. ಅದೇ ರೀತಿ, ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಮೂರು ಸಲ

بِسْمِ اللَّهِ الَّذِي لَا يَضُرُّ مَعَ اسْمِهِ شَيْءٌ فِي الْأَرْضِ وَلَا فِي السَّمَاءِ وَهُوَ السَّمِيعُ الْعَلِيمُ

ಬಿಸ್ಮಿಲ್ಲಾಹಿಲ್ಲಝೀ ಲಾ ಯದುರ್ರು ಮಅಸ್ಮಿಹೀ ಶೈಉನ್ ಫಿಲ್ ಅರ್ದಿ ವಲಾ ಫಿಸ್ಸಮಾಅ್, ವಹುವ ಸ್ಸಮೀಉಲ್ ಅಲೀಮ್. (ಯಾರ ನಾಮವನ್ನು ಉಚ್ಚರಿಸಿದರೆ ಭೂಮಿಯಲ್ಲಿ ಅಥವಾ ಆಕಾಶದಲ್ಲಿರುವ ಯಾವುದೇ ವಸ್ತುವಿ-

ಗೂ ಹಾನಿ ಮಾಡಲು ಸಾಧ್ಯವಿಲ್ಲವೋ ಆ ಅಲ್ಲಾಹನ ನಾಮದಲ್ಲಿ. ಅವನು ಎಲ್ಲವನ್ನೂ ಆಲಿಸುವವನೂ ತಿ-ಳಿದವನೂ ಆಗಿದ್ದಾನೆ) ಎಂದು ಹೇಳುವುದು. ಇದನ್ನು ಬೆಳಗ್ಗೆ ಮೂರು ಸಲ ಹೇಳಿದವರಿಗೆ ಸಂಜೆಯ ತನಕ ಯಾವುದೇ ವಸ್ತು ಹಾನಿ ಮಾಡುವುದಿಲ್ಲ ಮತ್ತು ಸಂಜೆ ಮೂರು ಸಲ ಹೇಳಿದವರಿಗೆ ಬೆಳಗಿನ ತನಕ ಯಾವುದೇ ವಸ್ತು ಹಾನಿ ಮಾಡುವುದಿಲ್ಲ ಎಂದು ಪ್ರವಾದಿ(ﷺ) ಯವರು ತಿಳಿಸಿದ್ದಾರೆ. ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ವರದಿಯಾದ ಈ ಝಿಕ್ರ್ ಮತ್ತು ರಕ್ಷಣೆ ಬೇಡುವ ಪ್ರಾ-ರ್ಥನೆಗಳೆಲ್ಲವೂ ಎಲ್ಲಾ ವಿಧದ ಕೆಡುಕುಗಳಿಂದ ರಕ್ಷಣೆ, ಸುರಕ್ಷತೆ, ನಿರ್ಭಯತೆ ನೀಡುವ ವಿಧಾನಗಳಾಗಿವೆ. ಆದ್ದರಿಂದ ಪ್ರತಿಯೊಬ್ಬ ಮುಸಲ್ಮಾನ ಸ್ತ್ರೀ-ಪುರುಷರು ಅಲ್ಲಾಹನಲ್ಲಿರುವ ಪೂರ್ಣ ನಂಬಿಕೆಯಿಂದ ಇವುಗಳನ್ನು ಹೇಳಬೇಕಾದ ಸಮಯದಲ್ಲೇ ಹೇಳಬೇಕು, ಮಾತ್ರವಲ್ಲ ಅದನ್ನು ರೂಢಿ ಮಾಡಿಕೊಳ್ಳಬೇಕು. ಅಲ್ಲಾಹು ಎಲ್ಲಾ ವಿ-

ಷಯಗಳನ್ನು ನಿಯಂತ್ರಿಸುವವನು, ಎಲ್ಲವನ್ನೂ ತಿಳಿದವನು ಮತ್ತು ಎಲ್ಲಾ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು. ಅವನಲ್ಲದೆ ಬೇರೆ ದೇವರಿಲ್ಲ. ಅವನಲ್ಲದೆ ಬೇರೆ ರಬ್ಬ್ ಇಲ್ಲ. ನಿಯಂತ್ರಣ, ತಡೆ, ಹಾನಿ ಮತ್ತು ಪ್ರಯೋಜನಗಳೆಲ್ಲವೂ ಇರುವುದು ಅವನ ಕೈಯಲ್ಲಿ ಮಾತ್ರ. ಅವನು ಎಲ್ಲ ವಸ್ತುಗಳ ಒಡೆಯನಾಗಿದ್ದಾನೆ." (ಫತಾವಾ ಶೈಖ್ ಇಬ್ನ್ ಬಾಝ್ 3/454-455)

4. ಅಬ್ದುಲ್ಲಾಹ್ ಇಬ್ನ್ ಉಮರ್(ﷺ) ಹೇಳುತ್ತಾರೆ. ಸಂಜೆಯಾದರೆ ಮತ್ತು ಬೆಳಗಾದರೆ ಪ್ರವಾದಿ(ﷺ) ಯವರು ಈ ಪ್ರಾರ್ಥನೆಗಳನ್ನು ಹೇಳದೆ ಬಿಡುತ್ತಿರಲಿಲ್ಲ:

اللَّهُمَّ إِنِّي أَسْأَلُكَ الْعَافِيَةَ فِي الدُّنْيَا وَالْآخِرَةِ. اللَّهُمَّ إِنِّي أَسْأَلُكَ الْعَفْوَ وَالْعَافِيَةَ فِي دِينِي وَدُنْيَايَ وَأَهْلِي وَمَالِي. اللَّهُمَّ اسْتُرْ عَوْرَاتِي وَآمِنْ رَوْعَاتِي. اللَّهُمَّ احْفَظْنِي مِنْ

بَيْنِ يَدَيَّ وَمِنْ خَلْفِي وَعَنْ يَمِينِي وَعَنْ شِمَالِي وَمِنْ فَوْقِي، وَأَعُوذُ بِعَظَمَتِكَ أَنْ أُغْتَالَ مِنْ تَحْتِي.

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಆಫಿಯತ ಫಿದ್ದುನ್ಯಾ ವಲ್ ಆಖಿರ. ಅಲ್ಲಾಹುಮ್ಮ ಇನ್ನೀ ಅಸ್‌ಅಲುಕಲ್ ಅಫ್ವ ವಲ್ ಆಫಿಯತ ಫೀ ದೀನೀ ವದುನ್ಯಾಯ ವ ಅಹ್ಲೀ ವ ಮಾಲೀ. ಅಲ್ಲಾಹುಮ್ಮಸ್ತುರ್ ಔರಾತೀ ವ ಆಮಿನ್ ರೌಆತೀ. ಅಲ್ಲಾಹುಮ್ಮಹ್ಫಝ್ ನೀ ಮಿನ್ ಬೈನಿ ಯದಯ್ಯ ವಮಿನ್ ಖಲ್ಫೀ ವ ಅನ್ ಯಮೀನೀ ವ ಅನ್ ಶಿಮಾಲೀ ವಮಿನ್ ಫೌಕೀ, ವ ಅಊಝು ಬಿಕ ಅನ್ ಉಗ್ತಾಲ ಮಿನ್ ತಹ್ತೀ (ಓ ಅಲ್ಲಾಹ್, ಇಹಲೋಕ ಮತ್ತು ಪರಲೋಕದಲ್ಲಿ ನನಗೆ ಕ್ಷೇಮವನ್ನು ನೀಡಬೇಕೆಂದು ನಾನು ನಿನ್ನಲ್ಲಿ ಬೇಡುತ್ತೇನೆ. ಓ ಅಲ್ಲಾಹ್, ನನ್ನ ಧರ್ಮ, ಇಹಲೋಕ ವ್ಯವಹಾರ, ಕುಟುಂಬ ಮತ್ತು ಸಂಪತ್ತಿನಲ್ಲಿ ನನಗೆ ಕ್ಷಮೆ ಮತ್ತು ಕ್ಷೇಮವನ್ನು ನೀಡಬೇಕೆಂದು ನಾನು

ನಿನ್ನಲ್ಲಿ ಬೇಡುತ್ತೇನೆ. ಓ ಅಲ್ಲಾಹ್, ನನ್ನ ತಪ್ಪುಗಳನ್ನು ಮರೆಮಾಚು, ನನಗೆ ದುಃಖ ನೀಡುವ ಸಂಗತಿಗಳಿಂದ ನನ್ನನ್ನು ರಕ್ಷಿಸು. ಓ ಅಲ್ಲಾಹ್, ನನಗೆ ನನ್ನ ಮುಂಭಾಗದಿಂದ, ಹಿಂಭಾಗದಿಂದ, ಬಲಭಾಗದಿಂದ, ಎಡಭಾಗದಿಂದ ಮತ್ತು ಮೇಲ್ಭಾಗದಿಂದ ಸಂರಕ್ಷಣೆ ನೀಡು. ನನ್ನ ಅಡಿ ಭಾಗದಿಂದ ನಾನು ನಾಶವಾಗುವುದರ ಬಗ್ಗೆ ನಾನು ನಿನ್ನಲ್ಲಿ ರಕ್ಷಣೆ ಕೋರುತ್ತಿದ್ದೇನೆ) (ಅಬೂದಾವೂದ್ 5074, ಇಬ್ನ್ ಮಾಜ 3871)

ಶೈಖ್ ಅಬುಲ್ ಹಸನ್ ಅಲ್ ಮುಬಾರಕ್‌ಪುರಿ ಹೇಳುತ್ತಾರೆ: "ಓ ಅಲ್ಲಾಹ್, ನಾನು ನಿನ್ನಲ್ಲಿ ಕ್ಷೇಮವನ್ನು ಬೇಡುತ್ತೇನೆ, ಅಂದರೆ ಧಾರ್ಮಿಕ ಆಪತ್ತುಗಳಿಂದ ಮತ್ತು ಭೌತಿಕ ಕಷ್ಟಗಳಿಂದ ರಕ್ಷಣೆಯನ್ನು ಬೇಡುತ್ತೇನೆ. ಹೀಗೂ ಹೇಳಲಾಗುತ್ತದೆ: ಕಾಯಿಲೆ ಮತ್ತು ಸಂಕಟಗಳಿಂದ ರಕ್ಷಣೆಯನ್ನು ಬೇಡುತ್ತೇನೆ. ಹೀಗೂ ಹೇಳಲಾಗುತ್ತದೆ: ಅವುಗಳ ಮೂಲಕ ನೀನು ನನ್ನನ್ನು ಪರೀಕ್ಷಿಸದಿರಲು, ಅವುಗಳ-

ನ್ನು ಸಹಿಸಿಕೊಳ್ಳುವ ಶಕ್ತಿಯನ್ನು ನೀಡಲು ಮತ್ತು ನಿನ್ನ ಆ ವಿಧಿಯ ಬಗ್ಗೆ ಸಂತೃಪ್ತಿಯನ್ನು ಸೂಚಿಸುವಂತೆ ಮಾಡಲು ನಾನು ನಿನ್ನಲ್ಲಿ ಬೇಡುತ್ತೇನೆ. ಆಫಿಯತ್ (ಕ್ಷೇಮ) ಎಂದರೆ ಅನಿಷ್ಟ ಕಾರ್ಯಗಳಿಂದ ಅಲ್ಲಾಹು ದಾಸನಿಗೆ ಸಂರಕ್ಷಣೆ ನೀಡಿ ರಕ್ಷಿಸುವುದು ಮತ್ತು ಎಲ್ಲಾ ರೀತಿಯ ತೊಂದರೆ-ಗಳಿಂದ ಕ್ಷೇಮ ಹಾಗೂ ರಕ್ಷಣೆಯನ್ನು ಒದಗಿಸುವುದು.

ಓ ಅಲ್ಲಾಹ್, ನಾನು ನಿನ್ನಲ್ಲಿ ಕ್ಷಮೆಯನ್ನು ಬೇಡುತ್ತೇನೆ, ಅಂದರೆ ನೀನು ನನ್ನ ಪಾಪಗಳನ್ನು ಕ್ಷಮಿಸಿ ನಿರ್ಲಕ್ಷಿಸಬೇ-ಕು ಎಂದು ಬೇಡುತ್ತೇನೆ. (ಮಿರ್ಆತುಲ್ ಮಫಾತೀಹ್ ಶರ್ಹು ಮಿಶ್ಕಾತಿಲ್ ಮಸಾಬೀಹ್ 8/139)

5. ಅಬ್ದುಲ್ಲಾಹ್ ಇಬ್ನ್ ಉಮರ್(ﷺ) ಹೇಳುತ್ತಾರೆ: ಪ್ರವಾದಿ(ﷺ) ಯವರು ಪ್ರಾರ್ಥಿಸುತ್ತಿದ್ದ ಒಂದು ಪ್ರಾ-ರ್ಥನೆ ಹೀಗಿದೆ:

اللَّهُمَّ إِنِّي أَعُوذُ بِكَ مِنْ زَوَالِ نِعْمَتِكَ

وَتَحَوُّلِ عَافِيَتِكَ وَفُجَاءَةِ نِقْمَتِكَ وَجَمِيعِ سَخَطِكَ.

ಅಲ್ಲಾಹುಮ್ಮ ಇನ್ನೀ ಅಊದುಬಿಕ ಮಿನ್ ಝುವಾಲಿ ನಿಅ್‌ಮತಿಕ ವ ತಹವ್ವುಲಿ ಆಫಿಯತಿಕ ವ ಫುಜಾಅತಿ ನಿಕ್ಮತಿಕ ವ ಜಮೀಇ ಸಖತಿಕ್ (ಓ ಅಲ್ಲಾಹ್, ನಿನ್ನ ಅನು-ಗ್ರಹವನ್ನು ಹಿಂಪಡೆಯುವ ವಿಷಯದಲ್ಲಿ, ನೀನು ನನಗೆ ದಯಪಾಲಿಸಿದ ಆರೋಗ್ಯವು ಬದಲಾಗುವ ವಿಷಯದ-ಲ್ಲಿ, ಅನಿರೀಕ್ಷಿತವಾಗಿ ನಿನ್ನ ಶಿಕ್ಷೆಗೆ ಪಾತ್ರವಾಗುವ ವಿಷಯ-ದಲ್ಲಿ ಮತ್ತು ನಿನ್ನ ಎಲ್ಲಾ ರೀತಿಯ ಅಸಮಾಧಾನಗಳಿಗೆ ಕಾರಣವಾಗುವ ಯಾವುದೇ ವಿಷಯದಲ್ಲಿ ನಾನು ನಿನ್ನಲ್ಲಿ ರಕ್ಷಣೆ ಕೋರುತ್ತಿದ್ದೇನೆ.) (ಮುಸ್ಲಿಂ 2739)

ಅಲ್‌ಮುನಾವೀ(رحمه الله) ಹೇಳುತ್ತಾರೆ: "ಬದಲಾಗುವುದು, ಅಂದರೆ ಮಾರ್ಪಡುವುದು ಅಥವಾ ಒಂದು ವಸ್ತುವಿ-ನಿಂದ ಕೊಂಡಿಯನ್ನು ಕಳಚಿಕೊಳ್ಳುವುದು. ಆರೋಗ್ಯ ಬದಲಾಗುವುದರಿಂದ ರಕ್ಷಣೆ ಬೇಡುವುದು ಅಂದರೆ

ನಿರಂತರ ಆರೋಗ್ಯವನ್ನು ಬೇಡುವುದಾಗಿದೆ. ಅಂದರೆ ಎಲ್ಲಾ ರೀತಿಯ ನೋವು ಮತ್ತು ಕಾಯಿಲೆಗಳಿಂದ ರಕ್ಷಣೆ-ಯನ್ನು ಬೇಡುವುದಾಗಿದೆ." (ಫೈದುಲ್ ಕದೀರ್ 2/140)

ಅಲ್‌ಅಝೀಮಾಬಾದಿ(ﷺ) ಹೇಳುತ್ತಾರೆ: "ಆರೋಗ್ಯವು ಬದಲಾಗುವುದು ಎಂದರೆ ಆರೋಗ್ಯವನ್ನು ರೋಗವಾಗಿ ಮತ್ತು ಶ್ರೀಮಂತಿಕೆಯನ್ನು ಬಡತನವಾಗಿ ಬದಲಾಯಿ-ಸುವುದು." (ಔನುಲ್ ಮಅ್‌ಬೂದ್ 4/283)

6. ಅನಸ್(ؓ) ರಿಂದ ವರದಿ. ಪ್ರವಾದಿ(ﷺ) ಯವರು ಹೀಗೆ ಪ್ರಾರ್ಥಿಸುತ್ತಿದ್ದರು:

اللَّهُمَّ إِنِّي أَعُوذُ بِكَ مِنَ الْبَرَصِ وَالْجُنُونِ وَالْجُذَامِ وَمِنْ سَيِّئِ الْأَسْقَامِ.

ಅಲ್ಲಾಹುಮ್ಮ ಇನ್ನೀ ಅಊಝು ಬಿಕ ಮಿನಲ್ ಬರಸಿ ವಲ್ ಜುನೂನಿ ವಲ್ ಜುಝಾಮಿ ವ ಸಯ್ಯಿಇಲ್

ಅಸ್ಕಾಮ್ (ಓ ಅಲ್ಲಾಹ್, ಕುಷ್ಟರೋಗ, ಬುದ್ಧಿಭ್ರಮಣೆ, ಪಕ್ಷವಾತ ಮತ್ತು ಕೆಟ್ಟ ರೋಗಗಳಿಂದ ನಾನು ನಿನ್ನಲ್ಲಿ ರಕ್ಷೆ ಬೇಡುತ್ತೇನೆ.) (ಅಹ್ಮದ್ 12592, ಅಬೂದಾವೂದ್ 1554, ಅನ್ನಸಾಈ 5493 ಶೈಕ್ ಅಲ್ಬಾನಿ ಇದನ್ನು ಸಹೀಹ್ ಎಂದಿದ್ದಾರೆ)

ಅತ್ತೀಬೀ ಹೇಳುತ್ತಾರೆ: “ ಅವರು ಎಲ್ಲಾ ರೀತಿಯ ರೋಗಗಳಿಂದ ರಕ್ಷಣೆ ಬೇಡದಿರಲು ಕಾರಣವೇನೆಂದರೆ, ಜ್ವರ, ತಲೆನೋವು, ಕಣ್ಣು ಉರಿ ಮುಂತಾದ ದೀರ್ಘಕಾಲಿಕವಲ್ಲದ ರೋಗಗಳನ್ನು ಸಹಿಸಿಕೊಳ್ಳುವುದು ಸುಲಭವಾಗಿದೆ ಮತ್ತು ಅವುಗಳನ್ನು ಸಹಿಸಿಕೊಂಡರೆ ಹೆಚ್ಚು ಹೆಚ್ಚು ಪ್ರತಿಫಲಗಳು ಸಿಗುತ್ತವೆ. ಅವರು ಈ ಹದೀಸಿನಲ್ಲಿ ರಕ್ಷಣೆ ಬೇಡಿರುವುದು ರೋಗಿಯಿಂದ ಆಪ್ತಮಿತ್ರರು ಕೂಡ ದೂರ ಓಡಿ ಹೋಗುವ ಮತ್ತು ರೋಗಿಯನ್ನು ಸಂತೈಸಲು, ಕಾಳಜಿವಹಿಸಲು ಜನರು ಹತ್ತಿರ ಬರದಂತಹ ರೋಗಗಳಿಂದಾಗಿದೆ.” (ಔನುಲ್ ಮಅ್‌ಬೂದ್)

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014
MOB: 9731593091 / 9945171612

**Jamiyathe Ahle Hadees
Mangalore**